**<u>ಸಾಕ್ಷಿಯನ್ನು ದಿನಾಂಕಃ 19.12.2025ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ. ಎನ್ ಎ ವಕೀಲರಿಂದ:</u>**

ವಾದಿ 30x35 ಅಳತೆಯ ಜಾಗದಲ್ಲಿ ಮನೆ ಕಟ್ಟಿರುವ ಕುರಿತು ವಾದಿಗೆ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಗೆ ಖಾತೆಯಾದ ಬಗ್ಗೆ ನನಗೆ ಒಂದು ವರ್ಷದ ಹಿಂದೆ ಗೊತ್ತಾಗಿರುತ್ತದೆ. ಸದರಿ ಖಾತೆಯನ್ನು ರದ್ದು ಮಾಡಲು ಅಪೀಲು ಸಲ್ಲಿಸಿರುತ್ತೇನೆ. ಸದರಿ ಕುರಿತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

2. ವಾದಿಗೆ ನಂಜೇಗೌಡ ಎಂಬ ಒಬ್ಬನೇ ಮಗ ಇರುತ್ತಾನೆ ಎಂದರೆ ಸಾಕ್ಷಿಯು ಆತ ಕಿರಿಯ ಹೆಂಡತಿಯ ಮಗ ಇರುತ್ತಾನೆ ಎಂದು ನುಡಿಯುತ್ತಾರೆ. ನಿಡಿ.13ರ ಬಗ್ಗೆ ಮತ್ತು ವಾದಿಯ ಹೆಂಡತಿಯ ಮಕ್ಕಳ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ. ಪಂಚಾಯಿತಿಯಲ್ಲಿ ಯಾರಿಗಾದರೂ ಖಾತೆ ಮಾಡುವ ಮೊದಲು ಸ್ಥಳ ಪರಿಶೀಲನೆ ಮಾಡುತ್ತಾರೆ ಎಂದರೆ ಸರಿ. ವಾದಿ ಆ ರೀತಿ ಮನೆ ಕಟ್ಟಿರುವ ಕಾರಣ, ಪಂಚಾಯಿತಿಯವರು ಸ್ಥಳ ಪರಿಶೀಲನೆ ಮಾಡಿ ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ.15ರ ಷೆಡ್ಯೂಲ್ ಆಸ್ತಿಯ ಪಂಚಾಯಿತಿ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸದರಿ ಖಾತೆಗಳು ವಾದಿಯ ಹೆಸರಿನಲ್ಲಿರುತ್ತವೆ ಎಂದರೆ ಸರಿ. ನಿಡಿ.15ರಲ್ಲಿರುವ ಚೆಕ್ಕುಬಂದಿಯೇ katha extract ನಲ್ಲಿ ಇರುತ್ತದೆ ಎಂದರೆ ಸರಿ. ನಿಡಿ.15ರ ಆಸ್ತಿಯನ್ನೇ ವಾದಿ ತನ್ನ ಮಗನಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಡಿ.15ರ ಆಸ್ತಿಯಲ್ಲೇ ವಾದಿ ಮತ್ತು ವಾದಿಯ ಕುಟುಂಬ ವಾಸವಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಕೇವಲ ಮನೆಯಲ್ಲಿರುತ್ತಾರೆ,

ಜಮೀನಿನಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ.

3. ನಾವು ಹೂಡಿರುವ ದಾವೇಯಲ್ಲಿ ನಿಡಿ.15ನ್ನು ಪ್ರಶ್ನೆ ಮಾಡಿರುವುದಿಲ್ಲ. ನಿಡಿ.15ರ ಆಸ್ತಿಗೂ ಈ ದಾವೇಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ವಾದಿ 20-25 ವರ್ಷಗಳಿಂದ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವಾಧೀನವನ್ನು ಸರ್ಕಾರ ಪ್ರಶ್ನಿಸಬೇಕೇ ಹೊರತು ನಾನು ಪ್ರಶ್ನಿಸುವ ಹಕ್ಕಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಎಂದಿಗೂ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.